ಶ್ರೀ ಕೆ. ಲಕ್ಕಪ್ಪ.—ಈ ಸೊಸೈಟಿಗಳ ಪೈಕಿ ಎಷ್ಟು ಸೊಸೈಟಿಗಳನ್ನು ಆಡಿಟ್ ಮಾಡಲಾಗಿದೆ? ಆರೀತಿ ಆಡಿಟ್ ಮಾಡಿದ ಮೇಲೆ ಎಷ್ಟು ಹಣ ದುರುಪಯೋಗವಾಗಿದೆ ಎಂಬುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಗೊತ್ತಿಲ್ಲ. ಅವರ ಪ್ರಶ್ನೆ ಇದಕ್ಕೆ ಸಂಬಂಧ ಪಟ್ಟಿಲ್ಲ.

ಶ್ರೀ ಎನ್. ನಂಜೇಗೌಡ.—ಕಿಕ್ಕೇರಿಗೆ ಮಗ್ಗಗಳನ್ನು ಸಪ್ಲೈಮಾಡಿ ಎಷ್ಟು ದಿನಗಳಾಗಿರಬಹುದು?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಮಾಹಿತಿ ಈಗ ನನ್ನಲ್ಲಿಲ್ಲ. ಕಿಕ್ಕೇರಿಗೆ 20 ಅಲಾಟ್ ಆಗಿವೆ. ಈಗ ಹಾಲಿ 8 ಕೆಲಸಮಾಡುತ್ತಿವೆ.

ಶ್ರೀ ಕೆ. ಎಚ್. ರಂಗನಾಥ್.—ಈ ಸಹಕಾರ ಸಂಘಗಳಿಗೆ ಆರ್ಟ್ ಸಿಲ್ಕ್ ಸಪ್ಲೈ ಮಾಡಿದ್ದಾರೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಅಲ್ಲಿಗೆ ಒಂದೇ ಒಂದು ಸಿಲ್ಕ್ ಸೊಸೈಟಿಯನ್ನು ಕೊಟ್ಟಿದ್ದೇವೆ.

Mr. SPEAKER.—I would invite the attention of the Minister for Health that names have been mentioned in the reply to this question No. 58 though the member concerned has not asked for the same.

Regularisation of Services of Teachers working under the erstwhile District Board High School now under the control of Taluk Boards in South Kanara District.

*Q.—67. Sri B. BHASKAR SHETTY (Kaup).—

Will the Government be pleased to state:—

(*a*) whether they are aware of any cases in South Kanara District where the erstwhile District Board High School teachers, presently under the control of Taluk Boards, who had put in more than two years of continuous service are not made permanent contrary to the Local Body Rules, denying them the benefit of annual increment, teachers provident fund, etc;

(*b*) if so, why they have not been made permanent and given the benefit of increment, etc;

(*c*) whether the new scale of pay is applicable to those teachers;

(*d*) if so, whether they are drawing their salaries at present in the new scale;

(*e*) if not, why?

A.—Sri S. R. KANTHI (Minister for Education).—

(*a*) Yes.

(*b*) Their services are to be regularised in the first instance.

(*c*) Yes.

(*d*) No.

(*e*) *Vide* reply to '*b*' above.

ಶ್ರೀ ಬಿ. ಭಾಸ್ಕರಶೆಟ್ಟಿ.—ಜಿಲ್ಲಾ ಮಂಡಲಿಯ ಪ್ರಾಥಶಾಲೆಗಳಲ್ಲಿ ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸಮಾಡಿದ್ದರೂ ಇನ್ನೂ ಖಾಯಂ ಆಗದೆ ಇರುವ ಉಪಾಧ್ಯಾಯರುಗಳ ಸಂಖ್ಯೆ ಯೆಷ್ಟು?

†ಶ್ರೀ ಎಸ್. ಆರ್. ಕಂಠಿ.—ಆ ಸಂಖ್ಯೆ ಬೇರೆ ಬೇರೆ ತರಹದಲ್ಲಿದೆ. ಗ್ರಾಜುಯೇಟ್ ಅಸಿಸ್ಟೆಂಟ್ಸ್—41, ಅಗ್ರಿಕಲ್‌ಚರಲ್ ಇನ್ಸ್‌ಪೆಕ್ಟರ್ಸ್—2, ಸೆಕ್ರೆಟೇರಿಯಲ್ ಅಸಿಸ್ಟೆಂಟ್—1, ಹಿಂದಿ ಪಂಡಿತರುಗಳು–15, ಕನ್ನಡ ಪಂಡಿತರುಗಳು–12, ಸಂಸ್ಕೃತ ಪಂಡಿತರು–1, ಡ್ರಾಯಿಂಗ್ ಮಾಸ್ಟರ್ಸ್—5, ಫಿಜಿಕಲ್ ಇನ್‌ಸ್ಟ್ರಕ್ಟರ್ಸ್—12, ಲೋಯರ್ ಡಿವಿಷನ್ ಕ್ಲರ್ಕ್ಸ್—7, ಲ್ಯಾಬೊರೇಟರಿ ಅಸಿಸ್ಟೆಂಟ್ಸ್—4 ಮತ್ತು ಪ್ಯೂನ್ಸ್—11.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎರಡು ವರ್ಷಗಳಿಗೆ ಮೇಲ್ಪಟ್ಟು ಸರ್ವಿಸ್ ಮಾಡಿರುವವರನ್ನು ಇನ್ನೂ ಖಾಯಂ ಮಾಡದೇ ಇರಲು ಸರ್ಕಾರಕ್ಕೆ ಉಂಟಾಗಿರತಕ್ಕ ತೊಂದರೆ ಏನು?

ಶ್ರೀ ಎಸ್. ಆರ್. ಕಂಠಿ.—ಈಗ ಜಿಲ್ಲಾ ಮಂಡಲಿಯ ಪ್ರೌಢ ಶಾಲೆಗಳನ್ನು ತಾಲ್ಲೂಕು ಬೋರ್ಡುಗಳಿಗೆ ಟ್ರಾನ್ಸ್‌ಫರ್ ಮಾಡಿದೆ. ಆ ಬಗ್ಗೆ ಅವರ ಸರ್ವಿಸ್ಸುಗಳನ್ನು ರೆಗ್ಯುಲರೈಜ್ ಮಾಡುವುದಕ್ಕೆ ರೂಲ್ಸ್ ಏನಿವೆಯೆಂಬುದು ಇವತ್ತಿನವರೆಗೂ ಗೊತ್ತಿಲ್ಲ. ಆ ರೂಲ್ಸನ್ನು ರೆಗ್ಯುಲರೈಜ್ ಮಾಡುವುದಕ್ಕೆ ಪರ್ಮಿಷನ್ ಕೇಳುತ್ತಿದ್ದಾರೆ. ರೂಲ್ಸ್ ಏನಿವೆಯೆಂಬುದನ್ನು ವಿಚಾರಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ರೀತಿ ರೆಗ್ಯುಲರೈಜ್ ಮಾಡುವುದಕ್ಕೆ ನಿಧಾನವಾಗಿರುವುದರಿಂದ ಉಪಾಧ್ಯಾಯರಿಗೆ ಸಿಕ್ಕುವ ಸೌಲಭ್ಯಗಳು ಸಿಕ್ಕದೆ ಹೋದಂತಾಗುವುದಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಈಗ ಆ ರೀತಿಯೇನೋ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಉಪಾಧ್ಯಾಯರುಗಳ ಸ್ಥಿತಿಗತಿಗಳನ್ನು ಯಾವ ರೀತಿ ಸುಧಾರಿಸಬೇಕು ಎಂಬ ಬಗ್ಗೆ ಯೋಚಿಸದೆ, ಯಾವ ನೀತಿನಿಯಮಗಳೂ ಇಲ್ಲದೆ ಮನಸ್ಸಿಗೆ ಬಂದಂತೆ ಮಾಡುತ್ತಾ ಹೋದರೆ, ಅವರ ಗತಿ ಏನಾಗುತ್ತದೆ, ಸರ್ಕಾರದ ಗಮನಕ್ಕೆ ಅವರು ಎಲ್ಲೆ ಇರುತ್ತಾರೆ ಎಂಬುದು ಬರುದಿದೆಯೇ?

ಶ್ರೀ ಎಸ್. ಆರ್. ಕಂಠಿ.—ಉಪಾಧ್ಯಾಯರುಗಳು ಇದ್ದಲ್ಲಿಯೇ ಇದ್ದಾರೆ. ಎಲ್ಲೂ ಹೋಗಿಲ್ಲ. ರೆಕ್ರೂಟ್‌ಮೆಂಟ್ ರೂಲ್ಸ್ ಯಾವ ರೀತಿಯಾಗಿವೆ, ಯಾವ ರೀತಿ ರೆಗ್ಯುಲರೈಜ್ ಮಾಡಬೇಕು, ಜಿಲ್ಲಾ ಮಂಡಲಿಯ ಪ್ರೌಢಶಾಲೆಗಳಲ್ಲಿ ಏನು ನಿಯಮಗಳಿದ್ದುವು ಎಂಬ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿ ಬೇಕೆಂದು ಕಾಣುತ್ತದೆ. ಅದಿನ್ನೂ ನರಿಯಾಗಿ ಗೊತ್ತಿಲ್ಲ. ಬೇಕಾದರೆ ಮಾನ್ಯ ಸದಸ್ಯರ ಸೂಚನೆ ಮೇರೆಗೆ ಅದನ್ನು ಪರಿಶೀಲಸೋಣ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಲೋಕಲ್ ಬೋರ್ಡ್ ಸರ್ವಿಸ್ ಮತ್ತು ತಾಲ್ಲೂಕ್ ಬೋರ್ಡ್‌ಗಳಲ್ಲಿ ಸುಮಾರು ಐದಾರು ವರ್ಷಗಳು ಸರ್ವಿಸ್ ಆಗಿರುವವರಿದ್ದರೂ ಅವರಿಗೇನೂ ಸೌಲಭ್ಯಗಳು ಸಿಕ್ಕುತ್ತಿಲ್ಲ. ಈವರೆಗೆ ಅನೇಕ ಉಪಾಧ್ಯಾಯರುಗಳು ಸರ್ಕಾರಕ್ಕೆ 20 ಬಾರಿ ಮನವಿಗಳನ್ನು ಕಳುಹಿಸಿಕೊಟ್ಟರೂ ಅವರ ವಿಚಾರವನ್ನು ಪರಿಶೀಲನೆ ಮಾಡಿಲ್ಲ. ಆದ್ದರಿಂದ ಈಗಲಾದರೂ ಅವರ ವಿಚಾರವನ್ನು ಪರಿಶೀಲಿಸಿ ಅವರ ಹಿಂದಿನ ಸರ್ವಿಸ್ಸನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಅದನ್ನೇ ನಾವು ಯೋಚನೆಮಾಡುತ್ತಿದ್ದೇವೆ.

ಶ್ರೀ ಜಿ. ವಿ. ಗೌಡ.—ತಾಲ್ಲೂಕು ಬೋರ್ಡ್‌ಗಳಿಗೆ ಈಗಲಾದರೂ ಆ ಬಗ್ಗೆ ಆಜ್ಞೆ ಮಾಡುತ್ತೀರಾ?

ಶ್ರೀ ಎಸ್. ಆರ್. ಕಂಠಿ.—ಡೆವಲಪ್‌ಮೆಂಟ್ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟುಗಳು ಎರಡೂ ಸೇರಿ ಈ ಕೆಲಸವನ್ನು ಮಾಡಬೇಕಾಗಿದೆ. ಮೊದಲನೆಯದಾಗಿ ಡಿ.ಸಿ. ಅವರಿಗೆ ಇವರನ್ನು ನೇಮಕಮಾಡುವ ಅಧಿಕಾರವಿಲ್ಲವೆಂದು ನಿರ್ಣಯಮಾಡಿದ್ದೇವೆ. ಎರಡನೆಯದಾಗಿ ರೂಲ್ಸ್ ರೆಗ್ಯುಲರೈಜ್ ಮಾಡುವ ಬಗ್ಗೆ ವಿಚಾರಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಥಳೀಯ ಸಂಸ್ಥೆಗಳಲ್ಲಿ ಎರಡು ವರ್ಷಗಳಿಗೆ ಮೇಲ್ಪಟ್ಟು ಸರ್ವಿಸ್ ಆದವರನ್ನು ರೆಗ್ಯುಲರೈಜ್ ಮಾಡಬೇಕೆಂಬುದಾಗಿ ರೂಲ್ಸ್ ಇದೆ. ಅಂದಮೇಲೆ ಈ ಬಗ್ಗೆ ಇಷ್ಟು ನಿಧಾನವಾಗುತ್ತಿರುವುದರಿಂದ ಅವರಿಗೆ ಬರತಕ್ಕ ಸೌಲಭ್ಯಗಳೆಲ್ಲವೂ ಹೋಗುವುದಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಎರಡು ವರ್ಷಗಳೇ ಎಂಬುದಾಗಿ ಖಚಿತವಾಗಿ ಗೊತ್ತಿಲ್ಲ. ಆದರೆ ಸರ್ಕಾರೀ ರೂಲ್ಸ್ ಏನಿವೆಯೋ ಅವನ್ನೇ ಅವರಿಗೂ ಅಪ್ಲೈ ಮಾಡಬೇಕೆಂಬ ಸೂಚನೆ ಇದೆ. ಅದನ್ನು ಇನ್ನೂ ವಿಚಾರಮಾಡುತ್ತಿದ್ದೇವೆ.

ಶ್ರೀ ಗೋಪಾಲ ಸಾರೆನ್ನ.—ಈ ಜಿಲ್ಲೆಯ ಹಲವು ಪ್ರೌಢಶಾಲೆಗಳಲ್ಲಿರತಕ್ಕ ಅಧ್ಯಾಪಕರ ಹುದ್ದೆಗಳು ವಂಜೂರಾಗಿದ್ದರೂ ಅವುಗಳ ಪೈಕಿ ಇನ್ನೂ ಕೆಲವು ಫಿಲಪ್ ಆಗದೇ ಇರತಕ್ಕ ಉಪಾಧ್ಯಾಯರ ಸಂಖ್ಯೆಯೆಷ್ಟು?

ಶ್ರೀ ಎಸ್. ಆರ್. ಕಂಠಿ.—ಆ ವಿಷಯದ ಬಗ್ಗೆ ಮಾನ್ಯ ಸದಸ್ಯರು ನೋಟೀಸ್ ಕೊಟ್ಟರೆ ಹೇಳುತ್ತೇನೆ. ಈಗ ಮಾಹಿತಿ ನನ್ನಲ್ಲಿಲ್ಲ.

†Indicates that the ramarks or speeches have not been revised by the mem concerned

Sri G. V. GOWDA.—Which is the agency to regularise the services of teachers ? Is it the Taluk Board ?

Sri S. R. KANTHI.—Yes.

Sri G. V. GOWDA.—What is the difficulty experienced by the Taluk Boards in regularising services of teachers who have put in more than two years ?

Sri S. R. KANTHI.—There are no rules. Rules are going to be framed. The Government rules do not apply.

Sri B. L. GOWDA.—Is the Taluk Board taken as a unit by itself or are several Taluk Boards grouped for purposes of appointment.

Sri S. R. KANTHI.—The Act is very clear. The appointments are to be made by the Taluk Boards themelves.

Sri G. V. GOWDA.—Has it come to the notice of Government that several Deputy Commissioners are insisting that they would appoint the teachers for these boards schools.

Sri S. R. KANTHI.—This question was pending settlement and now it has been settled that the D. C. will not appoint. It would be the Taluk Boards that would appoint.

Sri SANJEEVANATH AIKALA.—Why not the Government copy it from the Rules made by the Madras Government in this respect ?

Sri S. R. KANTHI.—The Government cannot do it. It has got its own rules.

Milk Societies formed under the Dairy Project Scheme.

*Q.—91. Sri K. LAKKAPPA (Hebbur).—

Will the Government be pleased to state :—

(*a*) the number of Milk Societies formed under the Dairy Project Scheme ;

(*b*) the number of applications pending for such formation of societies at various places under the new schemes ;

(*c*) the total amount grant allotted to the Societies ;

(*d*) what are the principles followed in selecting places for formation of Milk Societies ;

(*e*) will the Government place details of the names of those societies and names of villages together with office bearers selected last year ?

*A.—Sri M. V. KRISHNAPPA (Minister for Revenue).—

(*a*) Two hundred and Nineteen under the Bangalore Dairy Project. eight under the Bhadravathi Milk Supply Scheme.

(*b*) *Animal Husbandry Department*: Nill.
Bangalore Dairy Project: 29 applications.

(*c*) *Animal Husabndry Department*: Rs. 50,000 for 1963-64.